(ಇಂದು ದಿನಾಂಕ:26-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರ ನಂ.3 ಮತ್ತು 4 ರವರ ಪರ ಶ್ರೀ ಪಿಎಚ್‌ಎಮ್ ವಕೀಲರಿಂದ.**

1. ನಾನು ಎಸ್ ಬಿ ಐ ಕುಷ್ಟಗಿ ರಸ್ತೆಯ ಸಿಂಧನೂರು ಶಾಖೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತೇನೆ. ಅಪಘಾತವಾಗಿ 6-7 ವರ್ಷಗಳ ನಂತರ ನಾನು ಗಂಗಾವತಿಯ ಡಾ. ರಾಮಕೃಷ್ಣ ಆಸ್ಪತ್ರೆಗೆ ಹೋಗಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿ. ಸಿಂಧನೂರಿನ ಎಲ್ಲ ಆಸ್ಪತ್ರೆಗಳಲ್ಲಿ ಕೇಳಲಾಗಿ ಯಾರು ಕೊಡದೇ ಇದುದ್ದರಿಂದ ಸದರಿ ಮೇಲೇ ಹೇಳಿ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

2. ನನ್ನ ಪ್ರಸ್ತುತ ವೇತನದಲ್ಲಿ ಯಾವುದೇ ವ್ಯತ್ಯಾಸ ಆಗಿರುವುದಿಲ್ಲ. ನನಗೆ ಪ್ರತಿತಿಂಗಳು ರೂ.14 ಸಾವಿರ ಸಂಬಳ ಇರುತ್ತದೆ. ಅಂಗನ್ಯೂನ್ಯತೆ ಪ್ರಮಾಣ ಪತ್ರದಿಂದ ನನಗೆ ಯಾವುದೇ ರೀತಿಯ ಸಂಬಳ ಕಡಿತವಾಗಿರುವುದಿಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ, ಮೊದಲಿನ ಹಾಗೆ ಆರೋಗ್ಯವಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು.